MMR MEDIA Since 1975

# MANGALORE MARKET REPORTS

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.48 ENGLISH DAILY Subscription Yearly - Rs. - MONDAY 5-9-2022

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

## ಖಾರೀಫ್ ಸೀಸನ್‌ನ ಭತ್ತ ಬಿತ್ತ ಪ್ರಮಾಣ 5.62 ಶೇಕಡಾ ಇಳಿಕೆ

ಕೇಂದ್ರ ಸಚಿವಾಲಯದ ಪ್ರಕಟಣೆಯಂತೆ ಈ ವರ್ಷದ ಖಾರೀಫ್ ಸೀಸನ್‌ನಲ್ಲಿ ಭತ್ತ ಬಿತ್ತ ಪ್ರಮಾಣ ಹಿಂದಿನ ಸೀಸನ್‌ಗಿಂತ 5.62 ಶೇಕಡಾ ಇಳಿಕೆ ಯಾಗಿದೆಯೆನ್ನಲಾಗಿದೆ. ಈ ವರ್ಷದ ಬಿತ್ತನೆ 383.99 ಲಕ್ಷ ಹೆಕ್ಟೇರ್ ಆಗಿದ್ದು (ಈ ವರೆಗೆ) ಹಿಂದಿನ ವರ್ಷ ಇದೇ ಅವಧಿಯಲ್ಲಿ 406.89 ಲಕ್ಷ ಹೆಕ್ಟೇರ್ ಗಳಲ್ಲಿ ಬಿತ್ತನೆಯಾಗಿತ್ತೆನ್ನಲಾಗಿದೆ. ಜಾಖಂಡ್‌ನಲ್ಲಿ 9.80 ಲಕ್ಷ ಹೆಕ್ಟೇರ್, ಮಧ್ಯಪ್ರದೇಶದಲ್ಲಿ 6.32 ಲಕ್ಷ ಹೆಕ್ಟೇರ್, ಪಶ್ಚಿಮಬಂಗಾಳದಲ್ಲಿ 4.45 ಲಕ್ಷ ಹೆಕ್ಟೇರ್, ಛತ್ತೀಸ್‌ಗಡ್‌ದಲ್ಲಿ 3.91 ಲಕ್ಷ ಹೆಕ್ಟೇರ್, ಉತ್ತರಪ್ರದೇಶದಲ್ಲಿ 2.61 ಲಕ್ಷ ಹೆಕ್ಟೇರ್ ಮತ್ತು ಬಿಹಾರದಲ್ಲಿ 2.18 ಲಕ್ಷ ಹೆಕ್ಟೇರ್ ಪ್ರದೇಶಗಳ ಇಳಿಕೆಯಾಗಿದೆಯೆನ್ನಲಾಗಿದೆ. ತೆಲಂಗಾಣದಲ್ಲಿ 4.71 ಲಕ್ಷ ಹೆಕ್ಟೇರ್ ಹರಿಯಾಣದಲ್ಲಿ 0.94 ಲಕ್ಷ ಹೆಕ್ಟೇರ್ ನಾಗಾಲ್ಯಾಂಡ್‌ನಲ್ಲಿ 0.78 ಲಕ್ಷ ಹೆಕ್ಟೇರ್ ಮತ್ತು ಗುಜರಾತ್‌ನಲ್ಲಿ 0.55 ಲಕ್ಷ ಹೆಕ್ಟೇರ್‌ಗಳಲ್ಲಿ ಬಿತ್ತನೆ ಹೆಚ್ಚಳ ಕಂಡಿದೆಯೆನ್ನಲಾಗಿದೆ.

## ಬೇಳೆಕಾಳು ಬಿತ್ತನೆ ಪ್ರದೇಶ ಸ್ವಲ್ಪ ಮಟ್ಟಿನ ಇಳಿಕೆ

ಪ್ರಸ್ತುತ ಖಾರೀಫ್ ಸೀಸನ್‌ನಲ್ಲಿ ಇದುವರೆಗೆ 129.55 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬೇಳೆಕಾಳು ನಾಟಿಯಾಗಿದ್ದು, ಹಿಂದಿನ ಸೀಸನ್‌ನಲ್ಲಿ ಇದೇ ಅವಧಿಯಲ್ಲಿ 135.46 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಯಾಗಿತ್ತೆನ್ನಲಾಗಿದೆ. ಮಧ್ಯಪ್ರದೇಶ 4.08 ಲಕ್ಷ ಹೆಕ್ಟೇರ್, ಉತ್ತರಪ್ರದೇಶ 0.22 ಲಕ್ಷ ಹೆಕ್ಟೇರ್ ಮತ್ತು ಅಸ್ಸಾಂ 0.11 ಲಕ್ಷ ಹೆಕ್ಟೇರ್ ಪ್ರದೇಶಗಳಲ್ಲಿ ಬಿತ್ತನೆ ಹೆಚ್ಚಳವಾಗಿದೆಯೆನ್ನಲಾಗಿದೆ. ಮಹಾರಾಷ್ಟ್ರದಲ್ಲಿ 3.23 ಲಕ್ಷ ಹೆಕ್ಟೇರ್, ತೆಲಂಗಾಣದಲ್ಲಿ 1.70 ಲಕ್ಷ ಹೆಕ್ಟೇರ್, ಜಾಖಂಡ್‌ನಲ್ಲಿ 1.33 ಲಕ್ಷ ಹೆಕ್ಟೇರ್ ಮತ್ತು ಕರ್ನಾಟಕದಲ್ಲಿ 0.94 ಲಕ್ಷ ಹೆಕ್ಟೇರ್ ಪ್ರದೇಶಗಳ ಬಿತ್ತನೆ ಇಳಿಕೆಯಾಗಿದೆಯೆನ್ನಲಾಗಿದೆ. ಈ ವರ್ಷ ತೊಗರಿ ಬಿತ್ತನೆ ಹಿಂದಿನ ವರ್ಷದ ಇದೇ ಅವಧಿಯ 47.56 ಲಕ್ಷ ಹೆಕ್ಟೇರ್ ನಿಂದ 44.86 ಲಕ್ಷ ಹೆಕ್ಟೇರ್ ಗಳಿಗೆ ಇಳಿಕೆಯಾಗಿದೆಯೆನ್ನಲಾಗಿದೆ.

## ತೈಲ ಬೀಜಗಳ ಕೃಷಿ ಈ ವರ್ಷ ಖಾರೀಫ್‌ನಲ್ಲಿ ಹಿಂದಿನ ವರ್ಷದ ಇದೇ ಅವಧಿಯ ಸಮೀಪ

ಹಿಂದಿನ ವರ್ಷದ ಈ ಅವಧಿಯಲ್ಲಿ ಖಾರೀಫ್ ಸೀಸನ್‌ನಲ್ಲಿ 189.66 ಲಕ್ಷ ಹೆಕ್ಟೇರ್ ಪ್ರದೇಶಗಳಲ್ಲಿ ತೈಲಬೀಜಗಳ ಬಿತ್ತನೆಯಾಗಿದ್ದು, ಈ ವರ್ಷ ಇದುವರೆಗೆ 188.51 ಲಕ್ಷ ಹೆಕ್ಟೇರ್ ಪ್ರದೇಶಗಳಲ್ಲಿ ಬಿತ್ತನೆಯಾಗಿ ಅಲ್ಪ ಮಟ್ಟಿನ ಹಿನ್ನಡೆಯಾಗಿದೆಯೆನ್ನಲಾಗಿದೆ.

## ಕಬ್ಬು ನಾಟಿ ಸ್ವಲ್ಪ ಹೆಚ್ಚಳ

ಈ ಖಾರೀಫ್ ನಲ್ಲಿ ಇದುವರೆಗೆ 55.65 ಲಕ್ಷ ಹೆಕ್ಟೇರ್ ಪ್ರದೇಶಗಳಲ್ಲಿ ಕಬ್ಬು ನಾಟಿಯಾಗಿದ್ದು ಹಿಂದಿನ ವರ್ಷ ಇದೇ ಅವಧಿಯಲ್ಲಿ 54.70 ಲಕ್ಷ ಹೆಕ್ಟೇರ್ ಪ್ರದೇಶಗಳಲ್ಲಿ ನಾಟಿಯಾಗಿದೆಯೆನ್ನಲಾಗಿದೆ.

## ಆಮದಿತ ಖಾದ್ಯತೈಲಗಳ ಮೇಲಿನ ಆಮದು ಸುಂಕ ರಿಯಾಯತಿ ಅವಧಿ ವಿಸ್ತರಣೆ

ಕೇಂದ್ರ ಸರಕಾರ ಆಮದು ಖಾದ್ಯತೈಲಗಳ ಮೇಲಿನ ಆಮದು ಸುಂಕ ರಿಯಾಯತಿ ಅವಧಿಯನ್ನು 2023 ಮಾರ್ಚ ಕೊನೆಯ ತನಕ ವಿಸ್ತರಿಸಿದೆಯೆನ್ನಲಾಗಿದೆ.

## ಇಂಡೋನೇಶಿಯಾ ಪಾಮೆಣ್ಣೆ ರಫ್ತು ಲೆವಿರಹಿತ ಅವಧಿ ಅಕ್ಟೋಬರ್ 31 ರ ವರೆಗೆ ವಿಸ್ತರಣೆ

ಇಂಡೋನೇಶಿಯಾ ಪಾಮೆಣ್ಣೆ ರಫ್ತು ಲೆವಿರಹಿತ ಅವಧಿ ಅಕ್ಟೋಬರ್ 31 ರ ವರೆಗೆ ವಿಸ್ತರಿಸಿದೆ

## ಸೆಪ್ಟೆಂಬರ್ 2022 ಕ್ಕೆ ಸಕ್ಕರೆ ಮಾರಾಟ ಕೋಟಾ 2.35 ಮಿಲಿಯನ್ ಟನ್

ಸರಕಾರ ಸೆಪ್ಟೆಂಬರ್ ತಿಂಗಳಿಗೆ 2.35 ಮಿಲಿಯನ್ ಟನ್ ಗಳ ಸಕ್ಕರೆ ಮಾರಾಟ ಕೋಟಾವನ್ನು ನಿಗದಿಪಡಿಸಿದ್ದು ಹಿಂದಿನ ವರ್ಷದ ಇದೇ ತಿಂಗಳಲ್ಲಿ 2.2 ಮಿಲಿಯನ್ ಟನ್‌ಗಳಾಗಿತ್ತು. ಎಕ್ಸ್ ಮಿಲ್ ದರಗಳು ಹಿಂದಿನ ವರ್ಷದ ಈ ಅವಧಿಯಲ್ಲಿದ್ದುದಕ್ಕಿಂತ ಕಡಿಮೆಯಿದೆ. ಸಕ್ಕರೆ ಮಾರಾಟ ಕೋಟಾ ಹೆಚ್ಚಳದಿಂದ ದರ ದುರ್ಬಲವಾಗುವ ಸಾಧ್ಯತೆಯಿದೆಯೆನ್ನಲಾಗಿದೆ.